## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 67/2019

**ಸಾಕ್ಷಿಯನ್ನು ದಿಃ 21.09.2023 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಪ್ರಭಾಕರ | ಸಿಡಬ್ಲ್ಯೂ: 10 | ಪಿಡಬ್ಲ್ಯೂ: 07 |
| ತಂದೆಯ ಹೆಸರು | ರಾಮನಾಯಕ | | |
| ವಯಸ್ಸು | 45 ವರ್ಷ | | |
| ಉದ್ಯೋಗ | ಹೆಚ್ ಸಿ–287 ಹೆಚ್‌ಟಿಪಿಎಸ್ | | |
| ವಾಸಸ್ಥಳ | ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು 2017 ಜೂಲೈ ಯಿಂದ ಇಲ್ಲಿಯವರೆಗೂ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತಿದ್ದೇನೆ. ದಿಃ 01.06.2018 ರಂದು ಚಾಸಾ 13 ರವರು ಹುಣಸೂರು ಪಟ್ಟಣದಲ್ಲಿ ರಾತ್ರಿ ವೇಳೆ ಹೆಚ್ಚಾಗಿ ಕಳ್ಳತನವಾಗಿರುತ್ತಿರುವುದರಿಂದ ಚಾಸಾ 13 ಮತ್ತು ಚಾಸಾ 9 ರವರನ್ನು ವಿಶೇಷ ಗಸ್ತು ಮಾಡುವಂತೆ ತಿಳಿಸಿದ್ದು, ನನ್ನನ್ನು ಮತ್ತು ಪಿ.ಸಿ ಕಿರಣ್ ಕುಮಾರ್ ರವರನ್ನು ಜೀಪಿನಲ್ಲಿ ಕರೆದುಕೊಂಡು ಹುಣಸೂರು ಪಟ್ಟಣ ಠಾಣಾ ವ್ಯಾಪ್ತಿಯ ಪೋಸ್ಟ್ ಅಫೀಸ್ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದಾಗ, ರಾತ್ರಿ 3 ಗಂಟೆ ಸಮಯದಲ್ಲಿ 3 ಜನರು ಹೊಂಡಾ ಆಕ್ಟಿವಾ ಬೈಕಿನಲ್ಲಿ ಹೋಗುತ್ತಿದ್ದು, ನಮ್ಮ ಜೀಪನ್ನು ನೋಡಿ ವೇಗವಾಗಿ ಓಡಿಸಿಕೊಂಡು ಹೋಗುತ್ತಿದ್ದರು. ಆಗ ಚಾಸಾ 13 ರವರು ವಿಶೇಷ ಗಸ್ತಿನಲ್ಲಿ ಇದ್ದ ಚಾಸಾ 9 ರವರಿಗೆ ಕರೆ ಮಾಡಿ 3 ಜನ ಆಸಾಮಿಗಳು ಬೈಕಿನಲ್ಲಿ ಹಳೇ ಸೇತುವೆ ಬಳಿ ಬರುತ್ತಿದ್ದಾರೆ, ಅವರನ್ನು ತಡೆದು ನಿಲ್ಲಿಸಿ ಎಂದು ಹೇಳಿ ನಾವು ಅವರನ್ನು ಹಿಂಬಾಲಿಸಿಕೊಂಡು ಹೋದೆವು. ನಂತರ ರವಿ ಸಾಲಿಯಾನ್ ಹಂಚಿನ ಅಂಗಡಿ ಬಳಿ ಎಲ್ಲರೂ ಸುತ್ತುವರೆದು ಅವರನ್ನು ಹಿಡಿದಾಗ ಅವರು ಗಾಭರಿಗೊಂಡಿದ್ದರು. ಅವರಲ್ಲಿ ಒಬ್ಬ

ಆಸಾಮಿಯು ಠಾಣಾ ಮೊಕದ್ದಮೆ ಸಂಖ್ಯೆ 296/2018 ರ ಕಳ್ಳತನ ಪ್ರಕರಣಲ್ಲಿ ಹಾಜರುಪಡಿಸಿದ ಸಿಸಿಟಿವಿ ದೃಶ್ಯಾವಳಿಯಲ್ಲಿ ಇದ್ದ ವ್ಯಕ್ತಿಯಾಗಿರುತ್ತಾರೆ. ಸಿಸಿಟಿವಿ ಪೂಟೇಜ್ ನಲ್ಲಿ ಆತನ ಬಲಗೈ ಹೆಬ್ಬೆರಳಿನ ಹತ್ತಿರ ರನ್ನ ಎಂಬ ಹಚ್ಚೆ ಇತ್ತು. ನಂತರ ಬೈಕ್ ಯಾರದ್ದು ಎಂದು ಚಾಸಾ 13 ರವರು ವಿಚಾರಿಸಲಾಗಿ ಸದರಿ ಬೈಕನ್ನು ಹುಣಸೂರು ಪಟ್ಟಣದ ನ್ಯಾಯಾಧೀಶರ ಮನೆಯಿಂದ ಕಳ್ಳತನ ಮಾಡಿದ ಬೈಕ್ ಎಂದು ತಿಳಿಸಿರುತ್ತಾರೆ. ನಂತರ ಸದರಿ 3 ಜನರನ್ನು ಠಾಣೆಗೆ ಕರೆ ತಂದು ಕೂಲಂಕುಷವಾಗಿ ವಿಚಾರ ಮಾಡಲಾಗಿ 1 ನೇ ಆರೋಪಿ ಕಿರಣ್ ಆಜಾದ್ ನಗರ, 2 ನೇ ಆರೋಪಿ ವಿನೋದ್ ಮುತ್ತೂರು ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು, 3 ನೇ ಆರೋಪಿ ಸಂದೀಪ್ ಸರಸ್ವತಿ ಪುರಂ, ಹಾಲಿ ವಾಸ ಬನ್ನಿಬೀದಿ ಹುಣಸೂರು ಪಟ್ಟಣ ಎಂದು ತಿಳಿಸಿದ್ದರು. ಅವರನ್ನು ವಿಚಾರ ಮಾಡಲಾಗಿ ಹುಣಸೂರು ಪಟ್ಟಣದಲ್ಲಿ ಅನೇಕ ಕಳ್ಳತನ ಮಾಡಿರುವುದಾಗಿ ಹಾಗೂ ದಿಃ 15.05.2018 ರಂದು ಹುಣಸೂರು ಪಟ್ಟಣದ ಸರ್ಕಾರಿ ನೌಕರರ ಸಂಘದ ಕಟ್ಟಡದಲ್ಲಿ ಹಣದ ವಿಚಾರದಲ್ಲಿ ತೀಟೆ ಜಗಳ ತೆಗೆದು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಆ ಬಗ್ಗೆ ಚಾಸಾ 13 ರವರು ಕ್ರಮ ಕೈಗೊಂಡಿರುತ್ತಾರೆ. 1 ಕಪ್ಪು ಬಣ್ಣದ ಆಕ್ಟಿವಾ ಬೈಕ್, ಕಳ್ಳತನಕ್ಕೆ ಉಪಯೋಗಿಸಿದ 2 ರಾಡುಗಳು, ಚಿನ್ನದ ಒಡವೆಗಳು, ನ್ಯಾಯಾಧೀಶರ ಮನೆಯಲ್ಲಿ ಕಳ್ಳತನ ಮಾಡಿದ್ದ ಲ್ಯಾಪ್ ಟಾಪ್, ಅವರ ಬಳಿ ಇದ್ದ ಹಣ ಮತ್ತು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಯಿತು. ಈಗ ಹೇಳಲಾದ 2 ರಾಡುಗಳು ಮು.ಮಾ 1 ಮತ್ತು 2 ರಲ್ಲಿ ಇರುತ್ತವೆ. ಕಪ್ಪು ಬಣ್ಣದ ಆಕ್ಟಿವಾ ವಾಹನ, ಲ್ಯಾಪ್ ಟಾಪ್ ಅನ್ನು ಸಿಸಿ ನಂ. 752/2018 ರ ಪ್ರಕರಣಕ್ಕೆ ಅಳವಡಿಸಿಕೊಳ್ಳಲಾಗಿದೆ. ಆ ದಿನ ಸಿಕ್ಕ 3 ಜನ ಆರೋಪಿತರು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯ ಮುಂದಿರುವ 2 ನೇ ಆರೋಪಿ ವಿನೋದ ಆಗಿರುತ್ತಾರೆ, 1 ನೇ ಆರೋಪಿ ಬೇರೆ ನ್ಯಾಯಾಲಯದ ಪ್ರಕರಣದಲ್ಲಿ ರಾಮನಗರ ಜೆ.ಸಿ.ಯಲ್ಲಿದ್ದು, ಅವರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ ಎಂ.ಈ.ಎಂ.ವಕೀಲರಿಂದಃ**

ನನ್ನನ್ನು ಆ ದಿನ ವಿಶೇಷ ಗಸ್ತಿಗಾಗಿ ನೇಮಿಸಲಾಗಿತ್ತು ಎಂದು ಹೇಳಿದ್ದು, ಅದನ್ನು ಠಾಣಾ ಡೈರಿಯಲ್ಲಿ ನಮೂದಿಸಲಾಗಿತ್ತೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಚಾಸಾ 13 ರವರು ಗೊತ್ತು. ಆ ರೀತಿ

ಠಾಣಾ ಡೈರಿಯಲ್ಲಿ ನಮೂದು ಮಾಡಲು ನನಗೇನು ತೊಂದರೆ ಇರಲಿಲ್ಲ. ಚಾಸಾ 13 ರವರು ಚಾಸಾ 9 ರವಗೆ ಕರೆ ಮಾಡಿ ಆರೋಪಿಗಳ ಬಗ್ಗೆ ತಿಳಿಸಿದರು ಎಂದು ಹೇಳಿದ್ದು, ಅದನ್ನು ಚಾಸಾ 13 ರವರು ಚಾಸಾ 9 ರವರಿಗೆ ಫೋನ್ ಮತ್ತು ವಾಕಿ ಟಾಕಿ ಮೂಲಕ ತಿಳಿಸಿದರು. ಮೊದಲು ವಾಕಿ ಟಾಕಿ ಮೂಲಕ ತಿಳಿಸಿದರು. ವಾಕಿ ಟಾಕಿಯಲ್ಲಿ ಸ್ಪಷ್ಟವಾಗಿ ಕೇಳಿಸದ ಕಾರಣ ಪುನಃ ಫೋನಿಗೆ ಕರೆ ಮಾಡಿ ತಿಳಿಸಿದ್ದರು ಆ ದಿನ ಚಾಸಾ 13 ರವರು ಚಾಸಾ 9 ರವರಿಗೆ ಫೋನ್ ಮಾಡಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಅದು ನಮ್ಮ ಇಲಾಖಾ ಫೋನ್ ಆಗಿರಲಿಲ್ಲ, ಖಾಸಗಿಯದ್ದಾಗಿತ್ತು. ಆ ದಿನ ರವಿ ಸಾಲಿಯಾನ್ ರವರ ಹಂಚಿನ ಅಂಗಡಿ ಬಳಿ ಆರೋಪಿಗಳನ್ನು ತಡೆದಿದ್ದರೂ ಎಂದು ಹೇಳಿದ್ದು, ಅವರು ಬರುತ್ತಿದ್ದ ಬೈಕ್ ಸಂಖ್ಯೆ ಕೆಎ 11 ಆಗಿತ್ತು. ಮುಂದಿನ ಸಂಖ್ಯೆ ಮರೆತು ಹೋಗಿದೆ. ಆ ದಿನ ಆರೋಪಿಗಳು ಅಲ್ಲಿ ಇರಲೆ ಇಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ಸಿ.ಆರ್. 269/2018 ಈ ಪ್ರಕರಣಕ್ಕೆ ಸಂಬಂಧಪಟ್ಟಿದ್ದಲ್ಲ ಅಂದರೆ ಸದರಿ ಪ್ರಕರಣದ ಸಿಸಿಟಿವಿ ಫೂಟೇಜ್ ನಲ್ಲಿ ಹಚ್ಚೆ ಗುರುತಿಸಲಾಗಿತ್ತು. ಆದರೆ ಅದೆ ಪ್ರಕರಣ ಬೇರೆ ಇದೆ ಪ್ರಕರಣ ಬೇರೆ ಎಂದರೆ ಸರಿ. ಆ ರೀತಿ ಯಾವುದೇ ಹಚ್ಚೆ ಇರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು 8 ಕಳ್ಳತನ ಮತ್ತು 1 ಕೊಲೆ ಕೇಸಿನಲ್ಲಿ ಭಾಗಿಯಾಗಿದ್ದಾರೆ. ಅದರ ವಿವರಗಳು ನನಗೆ ಗೊತ್ತಿಲ್ಲ. ಆರೋಪಿಗಳು ಸರ್ಕಾರಿ ನೌಕರರ ಸಂಘದ ಕಟ್ಟಡದಲ್ಲಿ ಯಾವುದೊ ಒಬ್ಬ ಭಿಕ್ಷುಕನನ್ನು ಕೊಲೆ ಮಾಡಿರುವುದಾಗಿ ತಿಳಿಸಿದ್ದರು ಎಂದು ನಾನು ಹೇಳಿದ್ದು, ಈ ರೀತಿ ನನ್ನ ಹೇಳಿಕೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ವಿಚಾರ ನನ್ನ ಹೇಳಿಕೆಯಲ್ಲಿ ಇಲ್ಲದೆ ಇದ್ದರು ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಭಿಕ್ಷುಕ ಎಂಬ ಪದ ಇಲ್ಲ ಎಂದರೆ ಸರಿ. ಮು.ಮಾ 1 ಮತ್ತು 2 ರಲ್ಲಿರುವ ರಾಡ್ಗಳು ಹಳೆಯ ಮತ್ತು ತುಕ್ಕು ಹಿಡಿದಿರುವ ರಾಡುಗಳು ಎಂದರೆ ಸರಿಯಲ್ಲ, ನಾವು ಸೀಜ್ ಮಾಡಿದಾಗ ಚೆನ್ನಾಗಿದ್ದವು. ಇಂತಹ ರಾಡುಗಳು ಸಾಮಾನ್ಯವಾಗಿ ಕಟ್ಟಡ ಕಟ್ಟುವ ಜಾಗದಲ್ಲಿ ಬಿದ್ದಿರುತ್ತವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮು.ಮಾ ಗಳನ್ನು ತನಿಖಾ ಹಂತದಲ್ಲಿ ವಶಪಡಿಸಿಕೊಳ್ಳಲಾಗುತ್ತದೆ ಎಂದರೆ ಸರಿ. ಈ ರೀತಿ ತನಿಖಾ ಹಂತದಲ್ಲಿ ವಶಪಡಿಸಿಕೊಳ್ಳುವ ಮು.ಮಾ ಗಳ ಮೇಲೆ ಸಿ ಆರ್.ನಂ. ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದ ಸಿ.ಆರ್. ನಂ. ನನಗೆ ಗೊತ್ತಿಲ್ಲ, ಮರೆತು ಹೋಗಿದೆ. ಸದರಿ ಸಿ.ಆರ್.ನಂ. ಅನ್ನು ಮು.ಮಾ 1 ಮತ್ತು

2 ರ ರಾಡುಗಳ ಮೇಲೆ ನಮೂದು ಮಾಡಿಲ್ಲ ಎಂದರೆ ಸರಿ. ಆ ರೀತಿ ಈ ಪ್ರಕರಣದ ತನಿಖಾ ಹಂತದಲ್ಲಿ ಮು.ಮಾ 1 ಮತ್ತು 2 ಅನ್ನು ವಶಪಡಿಸಿಕೊಂಡಿದ್ದರೆ ಅದರ ಮೇಲೆ ಸಿ.ಆರ್. ನಂ. ನಮೂದಿಸಲಾಗುತ್ತಿತ್ತು ಎಂದರೆ ಅದರ ವಿಚಾರ ನನಗೆ ಗೊತ್ತಿಲ್ಲ.. ಈ ರೀತಿ ಮು.ಮಾ ಗಳನ್ನು ಮಹಜರ್ ಅಡಿ ವಶಪಡಿಸಿಕೊಡಿದ್ದರೆ ಮಹಜರ್ ಸಾಕ್ಷಿದಾರರ ಸಹಿ ಕೂಡ ಮು.ಮಾ. ಗಳ ಮೇಲೆ ಇರಬೇಕಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ವಶಪಡಿಸಿಕೊಂಡಿದ್ದರೆ ಪ್ರಕರಣದ ಸಂಖ್ಯೆ ಮತ್ತು ಸಾಕ್ಷಿದಾರರ ಸಹಿ ಇರಬೇಕಾಗಿತ್ತು ಆದರೆ ಮು.ಮಾ 1 ಮತ್ತು 2 ಅನ್ನು ನಾವು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೆ ವಸ್ತುಗಳನ್ನು ವಶಪಡಿಸಿಕೂಂಡಿಲ್ಲ ಮಹಜರ್ ಸಾಕ್ಷಿದಾರರ ಸಮಕ್ಷಮ ವಶಪಸಿಡಿಸಿಕೊಂಡಿದ್ದಾರೆ ಎನ್ನುತ್ತಾರೆ. ಆ ದಿನ ನಾನು ಚಾಸಾ 13 ರವರೊಂದಿಗೆ ಜೇಪಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಯಾವುದೆ ವಿಚಾರ ನನಗೆ ತಿಳಿಯದೆ ಇದ್ದರೂ ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳನ್ನು ನಾನು ಯಾವತ್ತೂ ನೋಡಿಲ್ಲ, ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಮೇಲ್ಕಂಡ 1 ನೇ ಆರೋಪಿ ಪರ ಮಾಡಿರುವ ಪಾಟೀ ಸವಾಲು 2 ನೇ ಆರೋಪಿ ಪರ ಅನುಮೋದಿಸಿಕೊಂಡು ಮುಂದುವರೆದ ಪಾಟೀ ಸವಾಲು ಶ್ರೀ ಎಸ್.ಕೆ.ವಕೀಲರಿಂದಃ**

ನನ್ನ ಆ ದಿನ ವಿಶೇಷ ಗಸ್ತಿನಲ್ಲಿ ನಮ್ಮೊಂದಿಗೆ ಕಿರಣ್ ಕುಮಾರ್ ರವರನ್ನು ನೇಮಿಸಿದ್ದರು ಎಂದು ಹೇಳಿದ್ದು ಅವರ ಹೇಳಿಕೆಯನ್ನು ಪಡೆದಕೊಳ್ಳಲಾಗಿದೆಯೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಆ ದಿನ ಗಸ್ತು ಕರ್ತವ್ಯದಲ್ಲಿ ಇದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.